**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**ಸಿ.ಸಿ ಃ 1/2022**

**ಸಾಕ್ಷಿದಾರರ ಹೆಸರು ಃ ಮೂರ್ತಪ್ಪ**

**ಸಿ.ಡಬ್ಲ್ಯೂ - 10**

**ತಂದೆಯ ಹೆಸರು ಃ ತಿಮ್ಮಪ್ಪ**

**ಪಿ.ಡಬ್ಲ್ಯೂ - 07**

**ವಯಸ್ಸು ಃ 51 ವರ್ಷ**

**ಉದ್ಯೋಗ ಃ ಎ ಎಸ್ ಐ.,**

**ವಾಸಸ್ಥಳ ಃ ಶೃಂಗೇರಿ**

**ದಿನಾಂಕಃ 12.07.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>**

ನಾನು ದಿಃ 16/12/2019 ರಿಂದ 31/07/2021 ರವರೆಗೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿಃ 01/08/2021 ರಿಂದ ಈ ತನಕ ಎ ಎಸ್ ಐ,. ಆಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

ದಿಃ 21/04/2021 ರಂದು ಚಾಸಾ 9 ರವರಿಂದ ಮೇಲಾಧಿಕಾರಿಗಳ ಆದೇಶದಂತೆ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಚಾಸಾ 9 ರವರು ದಿಃ 01/01/2018 ರಿಂದ 24/12/2020 ರವರೆಗೆ ಕಸಬಾ ಹೋಬಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು ಹಾಗೂ ಭೂ ಮಾಪಕರ ಹೆಸರುಗಳ ಪಟ್ಟಿಯನ್ನು ಕೇಳಿದ್ದು, ಸದರಿ ಹೆಸರುಗಳ ಪಟ್ಟಿಯನ್ನು ನಾನು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಅಧಿಕಾರಿಗಳ ಹೆಸರುಗಳ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ 5 ಎಂದು ಸಾಕ್ಷಿಯ ಸಹಿ 5-ಬಿ ಎಂದು ಗುರುತಿಸಲಾಯಿತು. ದಿಃ 23/04/2021 ರಂದು ಚಾಸಾ 1 ರವರಿಗೆ ಘಟನಾ ಸ್ಥಳದ ಸರ್ವೇ ನಂಬರ್ 215 ರ ದಾಖಲೆಗಳನ್ನು ಕೋರಿ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಮನವಿ ನೋಡಿ ಗುರುತಿಸಿದ್ದು ಅದನ್ನು ನಿಪಿ 10 ಎಂದು, ಸಾಕ್ಷಿಯ ಸಹಿ 10-ಎ ಎಂದು ಗುರುತಿಸಲಾಯಿತು. ದಿಃ 18/05/2021 ರಂದು ಚಾಸಾ 1 ರವರು ಘಟನಾ ಸ್ಥಳಕ್ಕೆ ಸಂಬಂಧಿಸಿ ದಾಖಲೆಗಳನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಯು

ದಾಖಲೆಗಳು ಅಂದರೆ ನಾನು ಕೇಳಿರುವ ಮಾಹಿತಿ 1 ರಿಂದ 6 ಕ್ಕೆ ಉತ್ತರ ಮತ್ತು ವರದಿ ನಿವೇದನೆ, ಒಂದು ಸ್ಕೆಚ್ ನೋಡಿ ಗುರುತಿಸಿರುತ್ತಾರೆ. ಮಾಹಿತಿ 1 ರಿಂದ 6 ಕ್ಕೆ ಉತ್ತರ ಮತ್ತು ವರದಿ ನಿವೇದನೆ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 11 ಎಂದು, ಸಾಕ್ಷಿಯ ಸಹಿ 11-ಎ ಎಂದು ಗುರುತಿಸಲಾಯಿತು. ಸ್ಕೆಚನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿರುತ್ತದೆ. ಚಾಸಾ 7 ರವರು ನೀಡಿರುವ ವರದಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿರುತ್ತದೆ. ದಿಃ 25/06/2021 ರಂದು ಘಟನಾ ಸ್ಥಳದ ಸರ್ವೇ ನಂಬರ್ 215 ರಲ್ಲಿ 0.02 ಗುಂಟೆಗೆ ಸಂಬಂಧಿಸಿ ಪಹಣಿ ನೀಡುವಂತೆ ಚಾಸಾ 1 ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ . ಸಾಕ್ಷಿಯು ಚಾಸಾ 1 ರವರಿಗೆ ನೀಡಿರುವ ಮನವಿ ಪತ್ರನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ 6 ಎಂದು, ಸಾಕ್ಷಿಯ ಸಹಿ 6-ಎ ಎಂದು ಗುರುತಿಸಲಾಯಿತು. ಚಾಸಾ 1 ರವರು ನೀಡಿರುವ ಘಟನಾ ಸ್ಥಳದ 3 ಪಹಣಿಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ 7 ಎಂದು, ಸಾಕ್ಷಿಯ ಸಹಿ 7-ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು 3 ಪಹಣಿಗಳನ್ನು ನೋಡಿ ಗುರುತಿಸಿರುತ್ತಾರೆ. ದಿಃ 17/11/2021 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಕಲಂ 41 ಎ ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸ್ ನೀಡಿರುತ್ತೇನೆ. ನಂತರ ದಿಃ 01/12/2021 ರಂದು ಶೃಂಗೇರಿ ಘನ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆಃ 01/2019 ರ ಆದೇಶ ಪುಟಗಳನ್ನು ನೀಡಲು ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯಕ್ಕೆ ಮಾಡಿರುವ ಮನವಿ ನೋಡಿ ಗುರುತಿಸಿದ್ದು ಅದನ್ನು ನಿಪಿ 12, ಸಾಕ್ಷಿಯ ಸಹಿ 12-ಎ ಎಂದು ಗುರುತಿಸಲಾಯಿತು. ದಿಃ 16/12/2021 ರಂದು ನ್ಯಾಯಾಲಯದಿಂದ ದಾವಾ ಸಂಖ್ಯೇ 1/2019 ರ ಆದೇಶ ಪುಟಗಳನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಆದೇಶ ಪುಟಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 13, ಸಾಕ್ಷಿಯ ಸಹಿ 13-ಎ ಎಂದು ಗುರುತಿಸಲಾಯಿತು. ದಿಃ 06/12/2021 ರಂದು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ಭಾವಚಿತ್ರ ತೆಗೆದು ಸಿಡಿಗೆ ಕಾಪಿ ಮಾಡಿರುವ ಸಂಬಂಧ ಚಾಸಾ 8 ರವರಿಂದ ದೃಢೀಕರಣವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 14 ಎಂದು, ಸಾಕ್ಷಿಯು ದೃಢೀಕರಣವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 15 ಎಂದು, ಸಾಕ್ಷಿಯ ಸಹಿ 15-ಎ ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದು ಕಲಂ 192 ಎ, 192 ಬಿ ಕರ್ನಾಟಕ ಲ್ಯಾಂಡ್ ರೆವೆನ್ಯೂ ಅಮೆಂಡ್ಮೆಂಟ್ ಆಕ್ಟ್ ಮತ್ತು ಕಲಂ 3, 4

ಕರ್ನಾಟಕ ಲ್ಯಾಂಡ್ ಗ್ರಾಬಿಂಗ್ ಪ್ರೋಹಿಬಿಶನ್ ಆಕ್ಟ್ ಮತ್ತು 434 ಐಪಿಸಿ ಸಾಭೀತು ಆಗದೇ ಇರುವುದರಿಂದ ಸದರಿ ಕಲಂಗಳನ್ನು ಕೈ ಬಿಡಲಾಗಿರುತ್ತದೆ. ಸಾಕ್ಷಿಯು ಮುಂದುವರೆದು ಆರೋಪಿಯು ಸರ್ವೇ ನಂಬರ್ 215 ರಲ್ಲಿ 0.02 ಗುಂಟೆ ಸ್ಥಳವನ್ನು ಸಮತಟ್ಟು ಮಾಡಿ ಒತ್ತುವರಿ ಮಾಡಿರುತ್ತಾನೆಂದು ನುಡಿದಿರುತ್ತಾರೆ.

**ನ್ಯಾಯಾಲಯದ ಪ್ರಶ್ನೆಗಳುಃ**

1. ಆರೋಪಿಯು ಸದರಿ ಸ್ಥಳವನ್ನು ಸಮತಟ್ಟು ಮಾಡಿ ಒತ್ತುವರಿ ಮಾಡಲು ಪ್ರಯತ್ನ ಮಾಡಿದ್ದರೂ ಸಹ ಮೇಲೆ ತಿಳಿಸಿರುವ ಕಲಂಗಳು ಏಕೆ ಕೈ ಬಿಡಲಾಗಿದೆ?

ಉಃ ಸಾಕ್ಷಿಯು ಉತ್ತರ ನೀಡಲು ಕಾಲವಕಾಶ ಬೇಕು ಎಂದು ನುಡಿಯುತ್ತಾರೆ.

2. ಸಮತಟ್ಟು ಯಾವ ಯಂತ್ರದಿಂದ ಮಾಡಲಾಗಿದೆ ?

ಉಃ ಸಾಕ್ಷಿಯು ಉತ್ತರ ನೀಡಲು ಕಾಲವಕಾಶ ಬೇಕು ಎಂದು ನುಡಿಯುತ್ತಾರೆ.

ಸದರಿ ಪ್ರಶ್ನೆಗಳಿಗೆ ಉತ್ತರ ನೀಡಲು ಸಾಕ್ಷಿಯ ಕೋರಿಕೆ ಮೇರೆಗೆ ಪ್ರಕರಣದ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಗಿದೆ.

**(ದಿನಾಂಕಃ 12.07.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**